



# ಹಿನ್ನೆಲೆಗಾಯನಕ್ಕೊಂದು ವ್ಯಾಖ್ಯಾನ ನೀಡಿದವರು, ವ್ಯಾಖ್ಯಾನವೇ ಆದವರು

## ಎಸ್.ಪಿ. ಬಾಲಸುಬ್ರಹ್ಮಣ್ಯಂ

# ಹಾಡುವ ಚಂದಿರ

**ಎಸ್‌ಪಿಬಿ ಅವರ ಕಂಠದಲ್ಲಿ ಎ.ಎಂ. ರಾಜಾ ಅವರ ತಂಗಾಳಿಯಂತಹ ಕಂಠ, ಪಿ.ಬಿ. ಶ್ರೀನಿವಾಸ್ ಅವರ ಕಂಠದ ಮೃದುತ್ವ, ಮಾರ್ದವತೆ ಮತ್ತು ರಫಿ ಅವರ ಕಂಠದ ಸುಲಲಿತತೆ ಮೇಳೈಸಿತ್ತು. 'ಆಯರ್‌ಪ್ವಾಡಿ ಮಾಳಿಗೆಯಿಲ್ ತಾಯ್‌ಮಡಿಲಿಲ್' ಎಂದು ಕೃಷ್ಣನಿಗೆ ಜೋಗುಳ ಹಾಡಿದ, 'ಪವಡಿಸು ಪರಮಾತ್ಮ' ಎಂದು ಶ್ರೀ ವೆಂಕಟೇಶನನ್ನು ಮಲಗಿಸಿದ ಎಸ್‌ಪಿಬಿ ಇಂದು ಸ್ವತಃ ಆ ಜೋಗುಳವನ್ನು ಆಲಿಸುತ್ತಾ ಚಿರನಿದ್ರೆಯಲ್ಲಿದ್ದಾರೆ.**

■ ವೇಣುಗೋಪಾಲ್ ಟಿ.ಎಸ್. ಮತ್ತು ಶೈಲಜ
ಚಿತ್ರಗಳು: ಡಿ.ಸಿ. ನಾಗೇಶ್

ಮದ್ರಾಸಿನ ಎಂಜಿನಿಯರಿಂಗ್ ಕಾಲೇಜಿನಲ್ಲಿ ಓದುತ್ತಿದ್ದ ಹದಿನೇಳರ ಹರೆಯದ ಒಬ್ಬ ಯುವಕ ಸಂಗೀತ ಸ್ಪರ್ಧೆಯೊಂದರಲ್ಲಿ ಹಾಡುತ್ತಾನೆ. ಎರಡನೇ ಬಹುಮಾನ ಬರುತ್ತದೆ. ಬಹುಮಾನ ವಿತರಣೆಯ ಸಂದರ್ಭದಲ್ಲಿ ಬಹುಮಾನ ವಿಜೇತರು ಹಾಡಬೇಕು ಅನ್ನೋದು ಅಲ್ಲಿಯ ಪದ್ಧತಿ. ಬಹುಮಾನ ವಿತರಣೆಗೆ ಬಂದ ಎಸ್. ಜಾನಕಿಯವರು ಹಾಡು ಕೇಳಿ ಸಿಟ್ಟಾಗುತ್ತಾರೆ. 'ಏನ್ರಿ ಇದು? ಈ ಹುಡುಗ ಎಷ್ಟು ಚೆನ್ನಾಗಿ ಹಾಡ್ತಾನೆ. ಇವನಿಗೆ ಎರಡನೇ ಬಹುಮಾನ ಕೊಟ್ಟಿದ್ದೀರಿ. ಮೊದಲ ಬಹುಮಾನ ಕೊಡಬೇಕಿತ್ತು' ಅಂತ ಸಂಘಟಕರನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಹುಡುಗನನ್ನು ಕರೆದು 'ಸಂಗೀತವನ್ನೇ ಮುಂದುವರಿಸು, ನಿನಗೆ ಒಳ್ಳೆಯ ಭವಿಷ್ಯವಿದೆ' ಅಂತ ಅವನಲ್ಲಿ ಸಂಗೀತದ ಕನಸನ್ನು ಬಿತ್ತುತ್ತಾರೆ. ಅವರ ಮಾತಿಗೆ ಬೆಲೆಕೊಟ್ಟು ಆ ಹುಡುಗ ಒಂದೆರಡು ವರ್ಷ ಪ್ರಯತ್ನಿಸುತ್ತಾನೆ. ಏನೂ ಗಿಟ್ಟದೆ, ಓದನ್ನು ಗಂಭೀರವಾಗಿ ಮುಂದುವರಿಸುತ್ತಾನೆ. ಆದರೆ, ಇನ್ನೊಂದು ಸ್ಪರ್ಧೆಯಲ್ಲಿ ಹುಡುಗನ ಹಾಡನ್ನು ಕೇಳಿದ ಸಂಗೀತ ನಿರ್ದೇಶಕ ಕೋದಂಡಪಾಣಿಯವರಿಗೆ ತುಂಬಾ ಸಂತೋಷವಾಗುತ್ತದೆ. ಕರೆದುಕೊಂಡು ಹೋಗಿ ಒಂದು ತೆಲುಗು ಸಿನಿಮಾದಲ್ಲಿ ಹಾಡಿಸುತ್ತಾರೆ. ಅಂದು ಸಿನಿಮಾ ಸಂಗೀತ ಕ್ಷೇತ್ರದಲ್ಲಿ ಒಂದು ಪ್ರಕಾಶಮಾನವಾದ ನಕ್ಷತ್ರ ಹುಟ್ಟಿತು. ಅದೇ ಎಸ್‌ಪಿಬಿ – ಶ್ರೀಪತಿ ಪಂಡಿತಾರಾಧ್ಯುಲ ಬಾಲಸುಬ್ರಹ್ಮಣ್ಯ.



ಹುಟ್ಟಿನಿಂದ ಆರಂಭಿಸಿ ಸಾವಿನವರೆಗೆ ಮಾನವನ ಎದೆ ಮಿಡಿದಿರಬಹುದಾದ ಎಲ್ಲ ಭಾವಗಳನ್ನೂ ತನ್ನ ಕಂಠದಲ್ಲಿ ಮಿಡಿದ ಜೀವ ಅದು. ಶೋಕ, ಹರುಷ, ಕೋಪ, ಪ್ರೀತಿ, ಪ್ರಣಯ, ಸ್ನೇಹ, ಕರುಣೆ, ಮಮತೆ, ಬಾಂಧವ್ಯ ಹೀಗೆ ಅತ್ಯಂತ ವೈವಿಧ್ಯಮಯ ಭಾವಲೋಕವನ್ನು ಅಭಿವ್ಯಕ್ತಿಸಲು ಸಾಧ್ಯವಾಗುತ್ತಿದ್ದ ಅಪರೂಪದ ಕಂಠ ಅವರದು. ನಗು, ಹಾಸ್ಯ, ಲೇವಡಿ, ತಿರಸ್ಕಾರ, ಪ್ರಣಯದ ಮುಲುಗುವಿಕೆ ಇವೆಲ್ಲವನ್ನೂ ಹಾಡಿನ ಭಾಗವಾಗಿಯೇ ಹೊರಹೊಮ್ಮಿಸಬಲ್ಲಂತಹ ಸಹಜ ಶಾರೀರ ಅವರದು. ಅವರು ಹಾಡಿರುವ 'ರೋಜಾ' ಚಿತ್ರದ 'ಕಾದಲ್ ರೋಜಾವೇ' ಹಾಡನ್ನು ಕೇಳಿದ ಯಾವುದೇ ಮನಸ್ಸಾದರೂ ಒದ್ದೆಯಾಗದಿರಲು ಸಾಧ್ಯವೇ? ಎಲ್ಲಾ ತರದ ಸಂದರ್ಭಗಳಿಗೂ ಮಿಡಿಯಬಲ್ಲ ಅವರ ಕಂಠ ಎಲ್ಲಾ ತೆರನಾದ ಜನರನ್ನು ಕಲಕುತ್ತಿತ್ತು.

'ಶ್ರೀ ಶ್ರೀ ಮರ್ಯಾದ ರಾಮಣ್ಣ' ಎಂಬ ತೆಲುಗು ಚಿತ್ರದಿಂದ 1966ರಲ್ಲಿ ತಮ್ಮ ವೃತ್ತಿಬದುಕನ್ನು ಆರಂಭಿಸಿದ ಎಸ್‌ಪಿಬಿ 'ನನಗೆ ಅತ್ಯಂತ ಪ್ರಿಯವಾದ ಭಾಷೆ ಸಂಗೀತ' ಎನ್ನುತ್ತಿದ್ದರು. ಎಲ್ಲ ಭಾರತೀಯ ಭಾಷೆಗಳನ್ನೂ ತಮ್ಮದಾಗಿಸಿಕೊಂಡು, 40,000ಕ್ಕೂ ಹೆಚ್ಚು ಹಾಡುಗಳನ್ನು ಹಾಡಿದ್ದಾರೆ. ಅವರು ಹಾಡಿದ ಎರಡನೆಯ ಹಾಡು ಕನ್ನಡ ಚಿತ್ರದ್ದು. ಬಹುಮುಖ ಪ್ರತಿಭೆ ಅವರದ್ದು. ಕಮಲಹಾಸನ್ ಅಂತಹವರಿಗೆ ಧ್ವನಿ ನೀಡಿದ್ದಾರೆ, ಚಿತ್ರಗಳಲ್ಲಿ ನಟಿಸಿದ್ದಾರೆ, ಸಂಗೀತ ನೀಡಿದ್ದಾರೆ. ದಕ್ಷಿಣ ಭಾರತದ ಎಲ್ಲಾ ಶ್ರೇಷ್ಠ ನಟರಿಗೂ ಹಾಡಿದ್ದಾರೆ. ಅಭಿಮಾನಿಗಳ ಪಾಲಿಗೆ ಅವರು 'ಹಾಡುವ ಚಂದಿರ'. ಆರು ರಾಷ್ಟ್ರಪ್ರಶಸ್ತಿಗಳಿಗೆ ಪಾತ್ರರಾಗಿದ್ದರು. ಎಸ್‌ಪಿಬಿ ಅವರ ಕಂಠದಲ್ಲಿ ಎ.ಎಂ. ರಾಜಾ ಅವರ ತಂಗಾಳಿಯಂತಹ ಕಂಠ, ಪಿ.ಬಿ. ಶ್ರೀನಿವಾಸ್ ಅವರ ಕಂಠದ ಮೃದುತ್ವ, ಮಾರ್ದವತೆ ಮತ್ತು ರಫಿ ಅವರ ಕಂಠದ ಸುಲಲಿತತೆ ಮೇಳೈಸಿತ್ತು.